*ನರಸಿಂಹ ಎಂ ಪೈ, ಹೊನ್ನಾವರ*
*ಗಣೇಶ ಇಲಿಯನ್ನೇ ತನ್ನ ವಾಹನವನ್ನಾಗಿ ಏಕೆ ಇರಿಸಿಕೊಂಡ?*



ಇಲಿಯದು ಕಡಿಮೆ ಆಹಾರ, ಹೆಚ್ಚು ಓಟ. ಮೈಲೇಜ್ ಚೆನ್ನಾಗಿದೆ ಎಂದು ಆರಿಸಿಕೊಂಡ ವೆಹಿಕಲ್ ಅದು!

*ಭಾನುಮತಿ ಭೋಜರಾಜ್, ಬಂಟ್ವಾಳ*
*ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಜನನಾಯಕರಿಂದ ನಾವು ಕಲಿಯುವುದು ಬೇಕಾದಷ್ಟಿದೆ. ಆದರೆ ಈಗಿನ ರಾಜಕಾರಣಿಗಳಿಂದ?*
ಇವರಿಂದಲೂ ಇದೆಯಲ್ಲಾ; ಬೀಚಿಯೇ ಹೇಳಿದಂತೆ ಅವರು ಎಕ್ಸಾಂಪಲ್, ಇವರು ವಾರ್ನಿಂಗ್!

*ಯಗಟಿ ರಘು ನಾಡಿಗ್, ಬೆಂಗಳೂರು*
*ಮುಂಬರುವ ಚುನಾವಣೆಯ ಖರ್ಚಿಗಾಗಿ ಹಣ ಬೇಕಿದೆ. ಓದುಗರಿಂದ ಒಂದಷ್ಟು ಫಂಡ್ ಕಲೆಕ್ಟ್ ಮಾಡಿಕೊಡ್ತೀರಾ?*
ನಮ್ಮ ಓದುಗರಿಂದಲೇ? ಫನ್ ಬೇಕಾದಷ್ಟು ಸಿಕ್ಕೀತು, ಫಂಡ್... ಸಾರಿ, ಇದು ಪಕ್ಷಾತೀತ ಅಂಕಣ.

*ಶಾಲಿನಿ ಜಮಾದಾರ, ಧಾರವಾಡ*
*ನಮ್ಮಲ್ಲಿ ನಂಬಿಕೆ ಹಾಗೂ ಧಾರ್ಮಿಕ ಆಚರಣೆಯಲ್ಲಿ ಸ್ವಾತಂತ್ರ್ಯವಿದೆಯೆಂದು ಪ್ರಾಮಾಣಿಕವಾಗಿ ವಾದಿಸಬಲ್ಲೆವೆ?*
ಛೆ! ವಾದವೇ ಬೇರೆ, ಪ್ರಾಮಾಣಿಕತೆಯೇ ಬೇರೆ ಎಂದರೊಬ್ಬ ನ್ಯಾಯವಾದಿ.

*ಎ. ರಾಜ್‌ಕುಮಾರ್, ಚಿತ್ರದುರ್ಗ*
*ಹೆಂಗಸರ ಸೀರೆ ಮರೆಯಾಗಿ ನೈಟಿ, ಚೂಡಿದಾರ ಬಂದಿದೆ. ಆದರೆ ಗಂಡಸರಿಗೆ?*



ಸರಿಗೆ ಪಂಚೆ ಸರಿದುಹೋಗಿ ಕೊಳವೆ ವಿಧದ ಬರ್ಮುಡಾ.

*ಮಹಾವೀರ ಕಾಸಾರ, ಚನ್ನಗಿರಿ*
*ಒಂದು ವರ್ಷದಲ್ಲಿ ಬಿಜೆಪಿ ಸರ್ಕಾರ ಜನತೆಗೆ ನೀಡಿದ್ದೇನು?*
ವೈಎಸ್‌ಆರ್ ಹೆಸರಿನಲ್ಲಿ ಒಂದು ದಿನ ಎಕ್ಸ್‌ಟ್ರಾ ರಜ!

*ಪಿ.ಎಸ್.ಶ್ರೀವತ್ಸ ಬೆಂಗಳೂರು*
*ಲಂಚ ಎಲ್ಲಿಲ್ಲ?*
ತೃಪ್ತಿ ಇದ್ದಲ್ಲಿ.

*ಎಂ.ಎಸ್.ಸೋಮಶೇಖರ್, ಮೈಸೂರು*
*ಕಳ್ಳನ ಹೆಂಡತಿ ಎಂದಿಗೂ ವಿಧವೆ; ಕಳ್ಳಿಯ ಗಂಡ?*
ಮಂತ್ರಿ! ರಾಬರಿ ದೇವಿಯ ಗಂಡ ಆದದ್ದು ಅದೇ ಅಲ್ಲವೇ!

*ಸವಿರವಿ, ಕೊಪ್ಪ*
*ಬೇರೆ ದೇವತೆಗಳಿಗೆ ಇರದ ಬಾಲ ಹನುಮಂತನಿಗೆ ಮಾತ್ರ ಏಕೆ?*
ಹನುಮ ಬೇರೆ ದೇವರ (ಹಿಂ)ಬಾಲ(ಕ) ಆದ್ದರಿಂದ.

*ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಐ ಕ್ಯಾಂಪಸ್*
*ಜನಗಳು ರಾಜಕಾರಣಿಗಳಿಗೆ ಸಭೆಗಳಲ್ಲಿ ಚಪ್ಪಲಿಯಲ್ಲಿ ಹಾಕುತ್ತಿದ್ದಾರಲ್ಲಾ...?*
ನಿಜಕ್ಕೂ ತಪ್ಪು. ಮೌಲ್ಯವಿಲ್ಲದವರ ಮೇಲೆ ಮೌಲ್ಯಯುತ ವಸ್ತುಗಳನ್ನು ಎಸೆಯಬಾರದು!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*
*ಗಡಿಯಾರ ಅಂದರೆ ಗಂಟೆ, ನಿಮಿಷ, ಸೆಕೆಂಡ್ ಮುಳ್ಳು ಇರುತ್ತದೆ. ಸಂಸಾರ ಎಂದರೆ?*
ನಿಮಿಷ ನಿಮಿಷಕ್ಕೂ ಮುಳ್ಳು ಇರುತ್ತದೆ!

*ಬಿ.ಆರ್.ಮನೋಹರ, ಬೆಂಗಳೂರು*
*ನಮಗಿಂತ ಕನಿಷ್ಠರನ್ನು ನೋಡಿ ನೆಮ್ಮದಿ ಹೊಂದಬೇಕೋ ಅಥವಾ ಉನ್ನತರನ್ನು ನೋಡಿ ಅಲ್ಲಿಗೆ ನಾವು ತಲುಪಿಲ್ಲವಲ್ಲಾ ಎಂದು ಯೋಚಿಸಬೇಕೋ...?*
ಗುರಿ ಎತ್ತರಕ್ಕೆ, ನೆಮ್ಮದಿ ಆಳಕ್ಕೆ ಇರಬೇಕು.

*ಎಂ.ಕೆ.ರಾಜೇಶ್, ಚಾಮರಾಜನಗರ*
*ಆಡದೆ ಮಾಡುವವನು ರೂಢಿಯೊಳಗೆ ಉತ್ತಮನು ಎಂದು ರಾಜಕಾರಣಿಗಳಿಗೇಕೆ ತಿಳಿದಿಲ್ಲ?*
ರೂಢಿಯೊಳಗುತ್ತಮನು ಎಂಬುದನ್ನು ಅವರು ರೌಡಿಯೊಳಗುತ್ತಮನು ಎಂದು ತಿಳಿದಿದ್ದಾರಂತೆ!

*ಸರಿತಾ ಶಿಬಂತಿ, ಬೆಳ್ತಂಗಡಿ*
*ವಿದ್ಯಾರ್ಥಿಗಳ ಉದ್ಧಾರಕ್ಕಾಗಿ ದುಡಿಯುವ ಶಿಕ್ಷಕನಿಗೂ, ಸಂಬಳಕ್ಕಾಗಿ ದುಡಿಯುವ ಶಿಕ್ಷಕನಿಗೂ ಏನು ವ್ಯತ್ಯಾಸ?*
ಮೊದಲನೆಯವ ಬಡವ, ಎರಡನೆಯವ ಭಡವ!

*ಮಧುಶ್ರೀ ಬಿ.ಆರ್, ಬೇಲೂರು*
*ಅಲ್ಲಿರುವುದು ನಮ್ಮ ಮನೆ, ಇಲ್ಲಿ ಬಂದೆ ಸುಮ್ಮನೆ ಅಂದರೆ ಏನು ಸಾರ್?*
ಸ್ವಂತ ಬಂಗಲೆ ಇದ್ದರೂ ಕ್ವಾರ್ಟರ್ಸ್ ಖಾಲಿ ಮಾಡುವುದಿಲ್ಲ ಎಂದು!

## ಬಹುಮಾನಿತ ಪ್ರಶ್ನೆ

*ಸುಧಾ ವಿ ರಾವ್ ಸಿಕಂದರಾಬಾದ್*
*ನಮ್ಮ ಜನರು ಯಾವುದೇ ಆಕ್ರೋಶಕ್ಕೂ ಬಸ್ಸು, ರೈಲುಗಳನ್ನು ಸುಡುವುದೇಕೆ? ಅದರಿಂದ ಆಗುವ ಉಪಯೋಗವೇನು?*
ರೈಲು ಬಿಡೋದನ್ನ ಬಸ್(ಸಾಕು) ಮಾಡಿ ಎಂದು ಹೇಳುವ ರೀತಿಯಂತೆ ಅದು! ಒಂದು ದಿನದ ರಜಾ ಸಿಗುವುದೇ ಅದರಿಂದಾಗುವ ಪ್ರಯೋಜನ!

*ಮಹೇಶ್ ಹೆಗಡೆ, ಹೆಗ್ಗೆ*
*ಕರ್ತವ್ಯನಿಷ್ಠೆ ಎಂದರೇನು ಎಂದು ಸರ್ಕಾರಿ ಅಧಿಕಾರಿಗಳನ್ನು ಕೇಳಿ ತಿಳಿಸಿರಿ...!*
ದಯವಿಟ್ಟು ಒಂದು ಸಹಾಯ ಮಾಡಿ ; ಅವರು ನಿದ್ರೆಯಿಂದ ಎದ್ದಿರುವ ಸಮಯ ಅರಿತು ತಿಳಿಸಿ, ನಾನು ಕೇಳಿ ಹೇಳುತ್ತೇನೆ.

*ಡಿ.ದೇವರಾಜು, ಬೆಂಗಳೂರು*
*ಅಗ್ನಿಶಾಮಕ, ಆಸ್ಪತ್ರೆ, ಆಂಬುಲೆನ್ಸ್ ಮುಂತಾದ ತುರ್ತುಸೇವೆಗಳ ನಂಬರ್ ನೀಡುವ ಪತ್ರಿಕೆಗಳು ಸ್ಮಶಾನಗಳ ಫೋನ್ ನಂಬರ್ ಏಕೆ ಕೊಡುವುದಿಲ್ಲ?*
ಸ್ಮಶಾನದಲ್ಲಿ ಮಲಗಿರುವವರು ಫೋನ್ ಎತ್ತುವುದಿಲ್ಲವಾದ್ದರಿಂದ.

*ಹಾಡ್ಯ ಜಯಾನಂದ, ಮೈಸೂರು*
*ಗೌಡರು ಪಿಎಂ ಆದದ್ದು, ಕುಮಾರಣ್ಣ ಸಿಎಂ ಆದದ್ದು ಆಕಸ್ಮಿಕವೆ, ಅಪಘಾತವೆ ಅಥವಾ ಹೋಮದ ಫಲವೆ?*
ಮೂರೂ ಅಲ್ಲ, ನಮ್ಮ ಜನಗಳ ಪೂರ್ವಕರ್ಮದ ಫಲ ಎಂದನೊಬ್ಬ ಜ್ಯೋತಿ.

*ಸಿರಕೊಳಂ ರಾಜಶೇಖರ, ಹಿಂದೂಪುರ*
*ವಾಸ್ತು ಪ್ರಕಾರ ಹೋದರೆ ದೇಶದಲ್ಲಿ ಇರುವ ಮನೆಗಳನ್ನೆಲ್ಲಾ ಕೆಡವಿ ಹೊಸದಾಗಿ ಕಟ್ಟಬೇಕಾಗುತ್ತದಲ್ಲಾ...?*
ಅದೆಷ್ಟೋ ವಾಸಿ! ಹಿಮಾಲಯವನ್ನು ಗುಜರಾತ್ ಹತ್ತಿರಕ್ಕೆ ವರ್ಗಾಯಿಸಿ, ಕಾವೇರಿಯನ್ನು ಕಾಶಿಗೆ ತಿರುಗಿಸಿ ಎನ್ನುತ್ತಂತೆ ಅದೇ ವಾಸ್ತು ಶಾಸ್ತ್ರ.

*ವಸುಂಧರಾ ಸತ್ಯ, ದೊಡ್ಡಬಳ್ಳಾಪುರ*
*ಹಿಂದೆ ರಾಜ ಮಹಾರಾಜರ ಓಲಗಗಳಲ್ಲಿ ವಿದೂಷಕರು ಇರುತ್ತಿದ್ದರು. ಈಗಿನ ಮಂತ್ರಿಗಳ ದರ್ಬಾರಿನಲ್ಲಿ?*



ದೂಷಕರು!

■ ರಾಮ್